# ೨೮.೦೧.೨೦೧೪ರಂದು ನಡೆದ ಪ್ರಶಾಸನ ಸಮಿತಿ ೧೮ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೧೮ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೨೮, ೨೦೧೪ರ ಮಂಗಳವಾರ ಮಧ್ಯಾಹ್ನ ೦೩.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಬಿ.ಎ. ರಾಜಶೇಖರ್,** ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೫. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೬. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ, ಕಸಂವಿ | ಸದಸ್ಯರು |
| ೭. | **ಪ್ರೊ. ಪಿ.ಬಿ. ಸಂತಪ್ಪನವರ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಜಂಟಿ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೧. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹದಿನೇಳನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 11.11.2013ರಂದು ನಡೆದ ಪ್ರಶಾಸನ ಸಮಿತಿ ಹದಿನೇಳನೆಯ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಉಪಸಮಿತಿಯನ್ನು ರಚಿಸಲಾಗಿದ್ದು, ಈ ಉಪಸಮಿತಿಯು ಈಗಾಗಲೇ ಸಭೆ ಸೇರಿ ವರದಿಯನ್ನು ನೀಡಿದ್ದು, ಪ್ರಶಾಸನ ಸಮಿತಿ ಮುಂದೆ ಮಂಡಿಸಲು ಕ್ರಮಕೈಗೊಳ್ಳಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ತರಬೇತಿ ವೇತನಶ್ರೇಣಿಯನ್ನು ನಿಗದಿಪಡಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಯುಜಿಸಿ ವೇತನಶ್ರೇಣಿಯ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. **ಅಧ್ಯಕ್ಷರ ಅಪ್ಪಣೆ ಮೇರೆಗೆ** ಚರ್ಚಿತವಾದ ವಿಷಯ ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ ಅರ್ಹ ಅಭ್ಯರ್ಥಿಗಳು ದೊರಕದೇ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: 21.12.2013ರಂದು ನಡೆದ ಹಣಕಾಸು ಸಮಿತಿ 12ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಹನ್ನೆರಡನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.12.2013ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 21.12.2013ರಂದು ನಡೆದ ಹಣಕಾಸು ಸಮಿತಿ 12ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿತು. ತ್ರೈಮಾಸಿಕಕ್ಕೆ ಸಂಬಂಧಿಸಿದ ಆರ್ಥಿಕ ಆಯವ್ಯಯಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 3: 20.01.2014ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 10ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ ಹತ್ತನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 20.01.2014ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಯನ್ನು ಮಾನ್ಯ ಕುಲಪತಿಗಳು ಸಭೆಯ ಮುಂದೆ ಮಂಡಿಸಿದರು. ಮುಖ್ಯವಾದ ವಿಚಾರಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 4: ಸಂಜೆ ಕಾಲೇಜಿನ ಕಾರ್ಯನಿರ್ವಹಣೆಗಾಗಿ ಹಿರಿಯ ಸಹಾಯಕ ಪ್ರಾಧ್ಯಾಪಕರನ್ನು ಪ್ರಾಚಾರ್ಯ ಹುದ್ದೆಗೆ ನೇಮಿಸುವ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಸಂಜೆ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಲು ಮಾನ್ಯ ಕುಲಪತಿಗಳ ಕಂಡಿಕೆ 101ರ ಅನ್ವಯ 10 ಜನ ಸಹಾಯಕ ಪ್ರಾಧ್ಯಾಪಕರಲ್ಲಿ ಒಬ್ಬ ಹಿರಿಯರನ್ನು ನೇಮಿಸಲು ಪ್ರಶಾಸನ ಸಭೆಯಲ್ಲಿ ಮಂಡಿಸಲಾಗಿದೆ.

ನಿರ್ಣಯ: **2014–15ರ ಸಾಲಿನಲ್ಲಿ ಸಂಜೆ ಕಾಲೇಜಿಗೆ ಪ್ರಾಚಾರ್ಯರೊಬ್ಬರನ್ನು ನೇಮಿಸುವ ಬಗೆಗೆ ಕ್ರಮವಹಿಸಬಹುದೆಂದು ಮಾನ್ಯ ಕುಲಪತಿಗಳು ಸೂಚಿಸಿದರು. 2013–14ನೇ ಸಾಲಿನ ಪ್ರಕ್ರಿಯೆ ಈಗಿರುವಂತೆಯೇ ಮುಂದುವರೆಯುವುದು ಸೂಕ್ತವೆಂದು ತಿಳಿಸಿದರು. ಈ ಅಂಶಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿತು.**

**ವಿಷಯ 5: ವಿದ್ವಾನ್ ಕೆ.ಎಲ್. ರಾಘವ –ಇವರ ಗೈರುಹಾಜರಿಯ ಬಗೆಗೆ.**

ಟಿಪ್ಪಣಿ: ವಿದ್ವಾನ್ ಕೆ.ಎಲ್. ರಾಘವ ಯೋಜನಾ ಸಹಾಯಕರಾಗಿ ನೇಮಕಾತಿ ಹೊಂದಿ ದಿನಾಂಕ: 09.01.2013ರಿಂದ ಸೇವೆ ಸಲ್ಲಿಸುತ್ತಿದ್ದರು. ಆದರೆ ದಿನಾಂಕ: 06.06.2013ರಂದು ಪತ್ರ ನೀಡಿ ಆರು ತಿಂಗಳ ರಜೆ ಅಥವಾ ಈ ಪತ್ರವನ್ನೇ ರಾಜಿನಾಮೆ ಎಂದು ಪರಿಗಣಿಸಲು ಕೋರಿದ್ದರು. ಪುನಃ ದಿನಾಂಕ: 02.12.2013ರಂದು ಕರ್ತವ್ಯಕ್ಕೆ ಹಾಜರಾಗಲು ಕೋರಿಕೆ ಪತ್ರ ಸಲ್ಲಿಸಿರುತ್ತಾರೆ. ಕಾರಣ ಸದರಿ ವಿಷಯವನ್ನು ಪ್ರಶಾಸನ ಸಭೆಯಲ್ಲಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಪೂರ್ವಾಪರ ವಿವರಗಳನ್ನು ಚರ್ಚಿಸಿತು. ಕೋರಿಕೆದಾರರು ಕೋರಿರುವ ಕ್ರಮ ಸೂಕ್ತವಲ್ಲವೆಂದೂ ಈ ಬಗೆಗೆ ಆರು ತಿಂಗಳ ಮೊದಲೇ ವಿಶ್ವವಿದ್ಯಾಲಯವು ಕ್ರಮವಹಿಸಬೇಕಾಗಿತ್ತೆಂದೂ ಸಭೆಯು ಅಭಿಪ್ರಾಯಪಟ್ಟಿತು. ಈ ಹಿನ್ನೆಲೆಯಲ್ಲಿ ಕೆ.ಎಲ್. ರಾಘವ ಅವರನ್ನು ಕೆಲಸಕ್ಕೆ ಹಾಜರಾಗಲು ಅನುವು ಮಾಡಿಕೊಡಬೇಕೆಂದು, ಪರಿವೀಕ್ಷಣಾ ಅವಧಿಯಲ್ಲಿ ಸದರಿ ಸಿಬ್ಬಂದಿಯ ಕಾರ್ಯಪ್ರಗತಿ ಮತ್ತು ನೈಪುಣ್ಯತೆ ತಿಳಿಯಲು ಸಾಧ್ಯವಾಗಿಲ್ಲದಿರುವ ಬಗೆಗೆ ಪತ್ರವೊಂದನ್ನು ನೀಡಬೇಕೆಂದು, ಅನಂತರ ಈ ಅಂಶವನ್ನು ಪ್ರಶಾಸನ ಸಮಿತಿಯ ಮುಂದೆ ಮಂಡಿಸಲು ಸಭೆಯು ಸೂಚಿಸಿತು.**

**ವಿಷಯ 6: ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ ತರಗತಿಗಳಿಗೆ ಬೋಧಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನಶ್ರೇಣಿಯಲ್ಲಿ ವೇತನ ನಿಗದಿಗೊಳಿಸುವ ಬಗೆಗೆ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ.**

ಟಿಪ್ಪಣಿ: ಈಗಾಗಲೇ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ ಮತ್ತು ಕಾವ್ಯ ತರಗತಿಗಳನ್ನು ಬೋಧಿಸುತ್ತಿರುವ ಶಿಕ್ಷಕರುಗಳಿಗೆ ತರಬೇತಿ ವೇತನಶ್ರೇಣಿಯನ್ನು ದಿನಾಂಕ: 16.05.2012ರ 4ನೇ ಪ್ರಶಾಸನ ಸಮಿತಿಯ ಹಾಗೂ ಹಣಕಾಸು ಸಮಿತಿ 8ನೇ ಸಭೆಯ ಅನುಮೋದನೆಯಂತೆ ಒಂದನೇ ಹಂತದಲ್ಲಿ ಬಿ.ಇಡಿ, ಟಿ.ಸಿ.ಹೆಚ್, ಶಿಕ್ಷಾಶಾಸ್ತ್ರಿ ತರಬೇತಿ ಹೊಂದಿದ 60 ಶಿಕ್ಷಕರಿಗೆ ವೇತನ ಶ್ರೇಣಿ ನೀಡಲಾಗಿದೆ. ಎರಡನೇ ಹಂತದಲ್ಲಿ ದಿನಾಂಕ: 08.05.2013ರ ಹಣಕಾಸು ಸಮಿತಿ 10ನೇ ಸಭೆಯ ಅನುಮೋದನೆಯಂತೆ ಹಿಂದೀಶಿಕ್ಷಕ್, ಶಿಕ್ಷಸ್ನಾತಕ್, ಹಿಂದೀ ಬಿ.ಇಡಿ, ತರಬೇತಿ ಹೊಂದಿದ 18 ಜನ ಶಿಕ್ಷಕರಿಗೆ ತರಬೇತಿ ವೇತನ ನೀಡಲಾಗಿದೆ. ಮೂರನೇ ಹಂತದಲ್ಲಿ ಈ ಕೆಳಕಂಡ 07 ಸಂಸ್ಕೃತ ಪಾಠಶಾಲೆಗಳ 12 ಜನ ಶಿಕ್ಷರುಗಳಿಗೆ ತರಬೇತಿ ವೇತನ ಶ್ರೇಣಿಯನ್ನು ಅನುಮೋದನೆ ನೀಡಲಾಗಿದೆ. ಇದರನ್ವಯ ಈ ಕೆಳಕಂಡ ಮೂರು ಸಂಸ್ಕೃತ ಪಾಠಶಾಲೆಗಳ 3ಜನ ಶಿಕ್ಷಕರ ತರಬೇತಿ ವೇತನ ಶ್ರೇಣಿ ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಇನ್ನು ಮುಂದೆ ತರಬೇತಿ ಹೊಂದಿ ತರಬೇತಿ ಶ್ರೇಣಿ ಪಡೆಯಲು ಸಲ್ಲಿಸುವ ಪ್ರಸ್ತಾವನೆಗಳಿಗೆ ಹಾಗೂ ನೇಮಕಾತಿ ಅನುಮೋದನೆ ಸಂದರ್ಭಗಳಲ್ಲಿ ತರಬೇತಿ ಪಡೆದವರಿಗೆ ತರಬೇತಿ ವೇತನ ಶ್ರೇಣಿಯಲ್ಲಿ ನೇಮಕಾತಿ ಅನುಮೋದನೆ ಮಾಡಲು ಅನುಮತಿಗಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ. | ಶಾಲೆಯ ಹೆಸರು ಮತ್ತು ವಿಳಾಸ | ಶಿಕ್ಷಕರ ಹೆಸರು ಮತ್ತು ಹುದ್ದೆ | ತರಬೇತಿ ವಿವರ ಮತ್ತು ವರ್ಷ | ಹಾಲಿ ಪಡೆಯುತ್ತಿರುವ ವೇತನ/ ವೇತನ ಶ್ರೇಣಿ | ತರಬೇತಿ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ/ ವೇತನ ಶ್ರೇಣಿ |
|---|---|---|---|---|---|
| 1. | ಶ್ರೀ ವಿದ್ಯಾಶಂಕರ ಸಂಸ್ಕೃತ ಪಾಠಶಾಲೆ, ರುದ್ರಪಟ್ಟಣ,ಹಾಸನ ಜಿಲ್ಲೆ. | ರಾಜಲಕ್ಷ್ಮಮ್ಮ ಆರ್.ಕೆ ಸಹಶಿಕ್ಷಕಿ | ಬಿ.ಇಡಿ 1996 | 26000 14550–26700 | 26700 16000–29600 |
| 2. | ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಯಡಿಯೂರು, ಕುಣಿಗಲ್ ತಾ॥ ತುಮಕೂರು ಜಿಲ್ಲೆ. | ಪಂಚಯ್ಯ ಶೇಖಯ್ಯ ಹಿರೇಮಠ ಸಹಶಿಕ್ಷಕರು | ಬಿ.ಇಡಿ 1998 | 16000 12500–24000 | 16400 13600–26000 |
| 3. | ಶ್ರೀ ಸದ್ಗುರು ಕಬೀರಾನಂದಸ್ವಾಮಿ ಸಂಸ್ಕೃತ ಪಾಠಶಾಲೆ, ಚಿತ್ರದುರ್ಗ | ಸಿ.ಎನ್ ನಿರ್ಮಲ ಸಹಶಿಕ್ಷಕಿ | ಬಿ.ಇಡಿ 1995 | 11800 11600–21000 | 13600 13600–26000 |

ನಿರ್ಣಯ: **ಸಭೆಯು ಮೂರು ಜನ ಶಿಕ್ಷಕರಿಗೆ ನೀಡಬೇಕಾದ ತರಬೇತಿ ವೇತನಶ್ರೇಣಿಯನ್ನು ನೀಡಲು ಅನುಮೋದಿಸಿತು. ಇನ್ನು ಮುಂದೆ ಸಲ್ಲಿಕೆಯಾಗುವ ಈ ಬಗೆಯ ತರಬೇತಿ ವೇತನಶ್ರೇಣಿಗೆ ಸಂಬಂಧಿಸಿದ ಪ್ರಸ್ತಾವನೆಗಳಿಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ನಿಯಮಾನುಸಾರ ಪರಿಶೀಲಿಸಿ ಕುಲಪತಿಯವರಿಂದ ಅನುಮೋದನೆ ಪಡೆಯಲು ಸಭೆ ಸೂಚಿಸಿತು.**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

**ವಿಷಯ 1: ಗ್ರೂಪ್ 'ಡಿ' (ಕಾವಲುಗಾರ) ಹುದ್ದೆಗೆ ಆಯ್ಕೆಯಾಗಿದ್ದ ಶ್ರೀ ವಸೀಮಕ್ರಮ್ ತಹಸೀಲ್‌ದಾರ –ಇವರ ನೇಮಕಾತಿಯನ್ನು ರದ್ದುಪಡಿಸುವ ಬಗೆಗೆ.**

ಟಿಪ್ಪಣಿ: ಶ್ರೀ ವಸೀಮ ಅಕ್ರಮ ತಹಸೀಲ್‌ದಾರ ಬಿನ್ ನಜೀರ್ ಅಹಮದ್ ತಹಸೀಲ್‌ದಾರ್ ಕಾವಲುಗಾರ ಹುದ್ದೆಗೆ ಅಭ್ಯರ್ಥಿಯಾಗಿ ಸಲ್ಲಿಸಿರುವ ಅರ್ಜಿಯೊಂದಿಗೆ ಸಂಬಂಧಪಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂ. 1, ಸವದತ್ತಿ –ಈ ಶಾಲಾ ಮುಖ್ಯೋಪಾಧ್ಯಾಯರು ದಿನಾಂಕ: 19.06.2013ರಂದು ನೀಡಿರುವ 7ನೇ ತರಗತಿ ಪರೀಕ್ಷೆಯಲ್ಲಿ ಪಡೆದ ಅಂಕಪಟ್ಟಿಯ ಪ್ರತಿಯನ್ನು ಲಗತ್ತಿಸಿ ತಪ್ಪು ಮಾಹಿತಿಯನ್ನು ನೀಡಿರುತ್ತಾರೆ (ಅಂಕ 486). ಈ ಬಗ್ಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸವದತ್ತಿ, ಬೆಳಗಾವಿ ಜಿಲ್ಲೆ –ಇವರಿಂದ ದಿನಾಂಕ: 13.01.2014ರಂದು ಪಡೆದ ವರದಿಯಲ್ಲಿ ದಿನಾಂಕ: 19.06.2013ರಂದು ನೀಡಿರುವ ಅಂಕಪಟ್ಟಿಯು ಶ್ರೀ ತೌಫೀಕ್ ಅಹ್ಮದ್ ನಜೀರ್ ತಹಸೀಲ್‌ದಾರ್ ಇವರ ಅಂಕಪಟ್ಟಿಯೆಂದು ದೃಢಪಡುತ್ತದೆ. ವಸೀಮ್ ಅಕ್ರಮ್ ತಹಸೀಲ್‌ದಾರ್ ಮತ್ತು ತೌಫಿಕ್ ಅಹ್ಮದ್ ತಹಸೀಲ್‌ದಾರ್ ಇವರಿಬ್ಬರೂ ಅಣ್ಣ ತಮ್ಮಂದಿರೆಂದು ವರದಿಯಲ್ಲಿ ಸ್ಪಷ್ಟವಾಗುತ್ತದೆ. ವಾಸ್ತವವಾಗಿ ವಸೀಮ್ ಅಕ್ರಮ ತಹಸೀಲ್‌ದಾರ್ ಇವರಿಗೆ ದಿನಾಂಕ: 16.06.2013ರಂದು 7ನೇ ತರಗತಿ ಅಂಕಪಟ್ಟಿ ನೀಡಿದ್ದು ಈ ಅಂಕಪಟ್ಟಿಯಲ್ಲಿ ಒಟ್ಟು ಅಂಕ 362 ಪಡೆದಿರುತ್ತಾನೆ.

ಈ ಹಿನ್ನೆಲೆಯಲ್ಲಿ ವಸೀಮ್ ಅಕ್ರಮ್ ತಹಸೀಲ್‌ದಾರ್ ಅರ್ಜಿಯೊಂದಿಗೆ ಸಲ್ಲಿಸಿರುವ ಅಂಕಪಟ್ಟಿ ಇವನ ಸಹೋದರ ತೌಫಿಕ್ ಅಹ್ಮದ್ ಇವರ ಅಂಕಪಟ್ಟಿಯಾಗಿರುವುದು ಸ್ಪಷ್ಟವಾಗಿರುತ್ತದೆ. ಬೇರೊಬ್ಬರ ಅಂಕಪಟ್ಟಿ ಲಗತ್ತಿಸಿ ಅರ್ಜಿ ಸಲ್ಲಿಸಿರುವುದನ್ನು ಗಮನಿಸಿ ಇವರ ನೇಮಕಾತಿಯನ್ನು ರದ್ದುಗೊಳಿಸಬಹುದಾಗಿದೆ.

ನಿರ್ಣಯ: **ಸಭೆಯು ಸಮಗ್ರವಾಗಿ ವಿವರಗಳನ್ನು ಪರಿಶೀಲಿಸಿತು. ಗ್ರೂಪ್ 'ಡಿ' (ಕಾವಲುಗಾರ) ಹುದ್ದೆಗೆ ಆಯ್ಕೆಯಾಗಿದ್ದ ವಸೀಮ್ ಅಕ್ರಮ್ ತಹಸೀಲ್ದಾರ್ –ಇವರ ನೇಮಕಾತಿಯನ್ನು ರದ್ದುಪಡಿಸಲು ಸಭೆಯು ಒಪ್ಪಿಗೆ ನೀಡಿತು.**

**ವಿಷಯ 2: ಸಂಸ್ಕೃತ ಕಾಲೇಜುಗಳು ಹಾಗೂ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಸ್ತುತ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳು ಸೇರಿದಂತೆ ಒಟ್ಟು 31 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಕಾಲೇಜುಗಳಲ್ಲಿ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2013–14ನೇ ಸಾಲಿನ ವಿದ್ಯಾರ್ಥಿವೇತನವನ್ನು ಪಾವತಿಸಬೇಕಾಗಿದೆ. ಅಲ್ಲದೇ, ರಾಜ್ಯದಲ್ಲಿನ ಸುಮಾರು 350ಕ್ಕೂ ಹೆಚ್ಚು ಸಂಸ್ಕೃತ ಪಾಠಶಾಲೆಗಳ ಪೈಕಿ 234 ಪಾಠಶಾಲೆಗಳನ್ನು ಅನುದಾನಕ್ಕೊಳಪಡಿಸಲಾಗಿದ್ದು, ಇತರ ಪಾಠಶಾಲೆಗಳನ್ನು ಅನುದಾನಕ್ಕೊಳಪಡಿಸುವಲ್ಲಿ ಕ್ರಮವಿಡಲಾಗಿದೆ. ಈ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2013–14ನೇ ಸಾಲಿನ ವಿದ್ಯಾರ್ಥಿವೇತನ ನೀಡಬೇಕಿದೆ.

ಸರ್ಕಾರದ 2013–14ನೇ ಸಾಲಿನ ಆಯವ್ಯಯದಲ್ಲಿ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ ನೀಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಲೆಕ್ಕಶೀರ್ಷಿಕೆ 2202–05–103–0–01–117ರ ಅಡಿಯಲ್ಲಿ **ಒಟ್ಟು ರೂ. 66.70 ಲಕ್ಷಗಳನ್ನು** (ಯೋಜನೆ ಮತ್ತು ಯೋಜನೇತರ) ಮಂಜೂರು ಮಾಡಲಾಗಿದ್ದು, ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಇಡಿ 260 ಯುಆರ್‌ಸಿ 2013, ಬೆಂಗಳೂರು, ದಿನಾಂಕ: 27.06.2013ರಲ್ಲಿ ಮತ್ತು ದಿನಾಂಕ: 29.10.2013ರ ಸಮಸಂಖ್ಯೆ ಆದೇಶದಂತೆ ಮೊದಲ ಹಾಗೂ ಎರಡನೇ ಕಂತಿನ ಅನುದಾನವಾಗಿ **ಒಟ್ಟು ರೂ. 33.35 ಲಕ್ಷಗಳನ್ನು** (ಯೋಜನೆ ಮತ್ತು ಯೋಜನೇತರ) ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಲಾಗಿದೆ. ಇನ್ನೂ ಎರಡು ಕಂತಿನ ಅನುದಾನವು ಸರ್ಕಾರದಿಂದ ಬಿಡುಗಡೆಗೊಳ್ಳಬೇಕಿದೆ.

ಈ ಅನುದಾನದಲ್ಲಿ ಕಾಲೇಜು ಹಾಗೂ ಪಾಠಶಾಲಾ ವಿದ್ಯಾರ್ಥಿಗಳಿಗಾಗಿ ವಿವಿಧ ಸಂಸ್ಕೃತ ಸ್ಪರ್ಧೆಗಳನ್ನು ಜಿಲ್ಲಾಮಟ್ಟ, ವಲಯಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ನಡೆಸಲಾಗಿದೆ. ನೂತನವಾಗಿ ಪರಿಷ್ಕರಿಸಿ ಮುದ್ರಿಸಲಾಗಿರುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಪ್ರಥಮ ವರ್ಷದ ಪಠ್ಯಪುಸ್ತಕಗಳನ್ನು ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಲು ಕ್ರಮವಹಿಸಲಾಗಿದೆ. ಉಳಿದ ಮೊತ್ತವನ್ನು ಬಳಸಿಕೊಂಡು ಸಂಸ್ಕೃತ ಕಾಲೇಜುಗಳು ಹಾಗೂ ಪಾಠಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರಗಳು ಈ ಕೆಳಗಿನಂತಿವೆ:

**2013–14ನೇ ಸಾಲಿನ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳ ವಿವರ**

| ಕ್ರ. ಸಂ. | ತರಗತಿ | ನಿರ್ಧರಿಸಿದ ಮೊತ್ತ | ಒಟ್ಟು ವಿದ್ಯಾರ್ಥಿಗಳು | ವಿದ್ಯಾರ್ಥಿವೇತನ ನೀಡುತ್ತಿರುವ ಸಂಖ್ಯೆ | ಶೇಕಡಾ | ಪ.ಜಾ/ಪ.ಪಂ /ಪ್ರ–1 | ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|
| **01** | **ಪ್ರಥಮಾ 3ನೇ ವರ್ಷ** | 100–00 | 11570 | 2893 | 25% | 1552 | 2,89,300–00 |
| **02** | **ಕಾವ್ಯ 2ನೇ ವರ್ಷ** | 200–00 | 5797 | 2899 | 50% | 796 | 5,79,800–00 |
| **03** | **ಸಾಹಿತ್ಯ 2ನೇ ವರ್ಷ** | 500–00 | 1390 | 1390 | 100% | 141 | 6,95,000–00 |
| **04** | **ವೇದ ಪ್ರಥಮಾ 3ನೇ ವರ್ಷ** | 100–00 | 614 | 154 | 25% | 43 | 15,400–00 |

| | | | | | | | |
|---|---|---|---|---|---|---|---|
| 05 | ವೇದ ಪ್ರವೇಶ 2ನೇ ವರ್ಷ | 200–00 | 162 | 81 | 50% | 10 | 16,200–00 |
| 06 | ವೇದ ಮೂಲ 2ನೇ ವರ್ಷ | 500–00 | 217 | 217 | 100% | 16 | 1,08,500–00 |
| ಪಾಠಶಾಲೆಗಳಿಗೆ ಒಟ್ಟು ಮೊತ್ತ ರೂ. | | | | | | | **17,04,200–00** |
| 01 | ಬಿ.ಎ. ವಿದ್ವನ್ಮಧ್ಯಮಾ– I | 1000–00 | 870 | 870 | 100% | – | 8,70,000–00 |
| 02 | ಬಿ.ಎ. ವಿದ್ವನ್ಮಧ್ಯಮಾ– II | 1500–00 | 590 | 590 | 100% | – | 8,85,000–00 |
| 03 | ಬಿ.ಎ. ವಿದ್ವನ್ಮಧ್ಯಮಾ–III | 2000–00 | 320 | 320 | 100% | – | 6,40,000–00 |
| 04 | ಎಂ.ಎ. ವಿದ್ವದುತ್ತಮಾ– I | 2500–00 | 282 | 282 | 100% | – | 7,05,000–00 |
| 05 | ಎಂ.ಎ. ವಿದ್ವದುತ್ತಮಾ– II | 3000–00 | 218 | 218 | 100% | – | 6,54,000–00 |
| ಕಾಲೇಜುಗಳಿಗೆ ಒಟ್ಟು ಮೊತ್ತ ರೂ. | | | | | | | **37,54,000–00** |
| ಒಟ್ಟು ಮೊತ್ತ ರೂ | | | | | | | **54,58,200–00** |

ನಿರ್ಣಯ: **ಸಭೆಯು ಸಮಗ್ರ ವಿವರಗಳನ್ನು ಪರಿಶೀಲಿಸಿತು. ಮಾನ್ಯ ಕುಲಪತಿಗಳು ಸರ್ಕಾರದಿಂದ ಮಂಜೂರಾಗಿರುವ 2013–14ನೇ ಸಾಲಿನ ವಿದ್ಯಾರ್ಥಿವೇತನವನ್ನು ಸರಿಯಾದ ರೀತಿಯಿಂದ ವಿತರಿಸಲು ಕೈಗೊಂಡಿರುವ ಕ್ರಮವನ್ನು ಸಭೆಯ ಮುಂದೆ ಮಂಡಿಸಿದರು. ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ಹಾಗೂ ವೇದ ಪ್ರಥಮಾ, ಪ್ರವೇಶ, ಮೂಲ ತರಗತಿಗಳಲ್ಲಿ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ಆಯಾಯ ಪಾಠಶಾಲೆಯ ಮುಖ್ಯಶಿಕ್ಷಕರ ಬ್ಯಾಂಕ್ ಖಾತೆಗೆ ನಿಯಮಾನುಸಾರ ಕಳುಹಿಸಲು ಮತ್ತು ಅದನ್ನು ಕ್ರಮಬದ್ಧವಾಗಿ ವಿತರಿಸಲು ಸಭೆಯು ಒಪ್ಪಿಗೆ ನೀಡಿತು. ಬಿ.ಎ. ಮತ್ತು ಎಂ.ಎ. ವಿದ್ಯಾರ್ಥಿಗಳಿಗೆ ಬ್ಯಾಂಕಿನ ಮೂಲಕ ಅವರವರ ಖಾತೆಗಳಿಗೆ ನೇರವಾಗಿ ಪಾವತಿಸಲು ಸಭೆ ಸೂಚಿಸಿ ಒಟ್ಟು ವಿದ್ಯಾರ್ಥಿವೇತನದ ಮೊತ್ತ ರೂ. 54,58,200/–ಗಳಿಗೆ ಅನುಮೋದನೆ ನೀಡಿತು.**

**ವಿಷಯ 3: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತೃತೀಯ ಘಟಿಕೋತ್ಸವವನ್ನು ನಡೆಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮೂರನೆಯ ಘಟಿಕೋತ್ಸವವನ್ನು ನಡೆಸುವ ಬಗೆಗೆ ಮಾನ್ಯ ಕುಲಪತಿಗಳು ಸಭೆಯ ಮುಂದೆ ವಿವರಗಳನ್ನು ಮಂಡಿಸಿದರು. ಈ ಘಟಿಕೋತ್ಸವ ಸಮಾರಂಭಕ್ಕಾಗಿ ರೂ. 7.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಿದರು. ಕಳೆದ ವರ್ಷ ನಡೆದ ಘಟಿಕೋತ್ಸವಕ್ಕೆ ರೂ. 6.00 ಲಕ್ಷ ವೆಚ್ಚವಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಈ ನಿಟ್ಟಿನಲ್ಲಿ ಘಟಿಕೋತ್ಸವ ನಡೆಸಲು ಸಭೆಯ ಅನುಮೋದನೆಯನ್ನು ಕೋರಿದರು.

ವಿಶ್ವವಿದ್ಯಾಲಯದಲ್ಲಿ ಬೇರೆ ಬೇರೆ ಶಾಸ್ತ್ರಭಾಗಗಳಲ್ಲಿ ಸ್ಥಾಪಿಸಲಾಗಿರುವ ದತ್ತಿನಿಧಿ ಮೊತ್ತದಿಂದ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ನೀಡಲು ಕ್ರಮಕೈಗೊಳ್ಳಬಹುದೆಂದು ಕುಲಪತಿಗಳು ಅಭಿಪ್ರಾಯಪಟ್ಟರು. 2012–13ನೇ ಸಾಲಿನಲ್ಲಿ ಎಂ.ಫಿಲ್ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ 2012–13ನೇ ಸಾಲಿನ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಪದವಿಯ ಅಂತಿಮ ವರ್ಷದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರಗಳನ್ನು ವಿತರಿಸಬೇಕಾಗಿದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ತೃತೀಯ ಘಟಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಸಂಸ್ಕೃತ ಭಾಷೆ, ಸಾಹಿತ್ಯ, ಶಾಸ್ತ್ರ, ವೇದ–ವೇದಾಂತ, ಇತರೇತರ ಜ್ಞಾನಸಂಬಂಧೀ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಐವರು ಹಿರಿಯ ವಿದ್ವಾಂಸರುಗಳಿಗೆ ಗೌರವ ಡಿ.ಲಿಟ್ ಪದವಿ ನೀಡಬಹುದೆಂದು ಸಭೆಯ ಮುಂದೆ ಮಂಡಿಸಿದರು.

ನಿರ್ಣಯ: **ಸಭೆಯು ಘಟಿಕೋತ್ಸವ ಸಮಾರಂಭಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚ ರೂ. 7.00 ಲಕ್ಷಕ್ಕೆ ಅನುಮೋದನೆಯನ್ನು ನೀಡಿತು. 2012–13ನೇ ಸಾಲಿನಲ್ಲಿ ಉತ್ತೀರ್ಣರಾದ ಸ್ನಾತಕ–ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರ ನೀಡಲು ಕ್ರಮವಹಿಸಬಹುದೆಂದು ಸಭೆ ಒಪ್ಪಿಗೆಯನ್ನು ಸೂಚಿಸಿತು. 2012–13ನೇ ಸಾಲಿನಲ್ಲಿ ಎಂ.ಫಿಲ್ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರ ನೀಡಲು ಕ್ರಮವಹಿಸಲು ಸಭೆಯು ಒಪ್ಪಿಗೆ ನೀಡಿತು.**

**ಮಾನ್ಯ ಕುಲಪತಿಗಳು ಸಭೆಯ ಮುಂದೆ ವಿವಿಧ ಪ್ರಕಾರಗಳಲ್ಲಿ ಸಾಧನೆ ಮಾಡಿರುವ ಈ ಕೆಳಕಂಡ ಐವರು ಹಿರಿಯ ವಿದ್ವಾಂಸರಿಗೆ ಗೌರವ ಡಿ.ಲಿಟ್ ಪದವಿ ನೀಡಬಹುದೆಂದು ಸೂಚಿಸಿದ ಅಂಶಕ್ಕೆ ಸಭೆಯು ಒಪ್ಪಿಗೆ ನೀಡಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ಪಡೆದುಕೊಳ್ಳಲು ಸಭೆಯು ಸೂಚಿಸಿತು.**

1. **ವಿದ್ವಾನ್ ಎಂ.ಎಸ್. ಬಸವರಾಜಯ್ಯ** (ಮೈಸೂರು ಜಿಲ್ಲೆ) — ಗ್ರಂಥಸಂಪಾದನ ಶಾಸ್ತ್ರ
2. **ಪ್ರೊ. ಎಂ.ಇ. ರಂಗಾಚಾರ್** (ಮಂಡ್ಯ ಜಿಲ್ಲೆ) — ಅನುವಾದ ಸಾಹಿತ್ಯ
3. **ಪ್ರೊ. ಆರ್.ಎಲ್. ಕಶ್ಯಪ್** (ಬೆಂಗಳೂರು ನಗರ ಜಿಲ್ಲೆ) — ವೇದ ಸಾಹಿತ್ಯ
4. **ಪ್ರೊ. ಡಿ. ಪ್ರಹ್ಲಾದಾಚಾರ್** (ಗದಗ ಜಿಲ್ಲೆ) — ಶಾಸ್ತ್ರ ಸಾಹಿತ್ಯ
5. **ವಿದ್ವಾನ್ ಕೆ.ಜಿ. ಸುಬ್ರಾಯ ಶರ್ಮಾ** (ಹಾಸನ ಜಿಲ್ಲೆ) — ವೇದಾಂತ ಸಾಹಿತ್ಯ/ಪ್ರಚಾರ

**ಮಾನ್ಯ ಕುಲಪತಿಗಳಿಂದ ನಡಾವಳಿಯ ಕರಡುಪ್ರತಿ ಅನುಮೋದನೆಗೊಂಡಿದೆ.**

**ವಿದ್ವಾನ್ ಪಿ.ಆರ್. ಪಾಗೋಜಿ**
ಉಪಕುಲಸಚಿವರು